**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.490/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಎಮ್.ಸಿ ಮಹೇಂದ್ರ | ಪ್ರಾಸಾ-9 |
| ತಂದೆಯ ಹೆಸರು | : ಲೇಟ್ ಚಂದ್ರೇಗೌಡ | ಚಾಸಾ-8 |
| ವಯಸ್ಸು | : 55 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಸಾಯ | ದಿನಾಂಕಃ 04.08.2025 |
| ವಾಸಸ್ಥಳ | : ಮರಸಣಿಗೆ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿದೆ. ಚಾಸಾ-1 ರಿಂದ 7 ರವರ ಪರಿಚಯ ನನಗಿದೆ.

ಕಳೆದ 4 ವರ್ಷಗಳ ಹಿಂದೆ ಚಾಸಾ-7 ರವರು ಚಾಸಾ-2 ರವರಿಗೆ ಆರೋಪಿಯ ಸ.5.00 ರ ಸವಯಕ್ಕೆ ಹೊಡೆದಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ಘಟನಾ ಸ್ಥಳಕ್ಕೆ ಹೋಗಿ ನೋಡಲಾಗಿ ಚಾಸಾ-2 ರವರ ಮುಖದಿಂದ ರಕ್ತಸ್ರಾವ ವಾಗುತ್ತಿರುವುದು ಕಂಡುಬಂದಿದ್ದು. ನಂತರ ಚಾಸಾ-2 ರವರವನ್ನು ಆಸ್ಪತ್ರೆಗೆ ಕಳುಹಿಸಿರುತ್ತೇವೆ. ನಂತರ ಪೋಲಿಸರು ಬಂದು ಸ್ಥಳ ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ. ಚಾಸಾ-1 ರಿಂದ 7 ರವರು ಮತ್ತು ಆರೋಪಿಯ ನಮ್ಮ ಎಸ್ಟೇಟ್ ನಲ್ಲಿ ವಾಸಿಸುತ್ತಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ದಿ.27.11.2022 ರಂದು ಚಾಸಾ-7 ರವರು ಜಗಳದ ಕುರಿತು ನನಗೆ ಮಾಹಿತಿಯನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಆರೋಪಿಯು ಚಾಸಾ-2 ರವರಿಗೆ ಕತ್ತಿಯಿಂದ ಹಲ್ಲೆ ಮಾಡಿದ ಪರಿಣಾಮ ಅವರ ಮೂಗು ಹರಿದಿದೆ ಎಂದು ನನಗೆ ವಿಷಯ ತಿವಳಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಜಿ.ಬಿ.ವಿ ವಕೀಲರಿಂದ**

ನಾನು ಮರಸಣಿಗೆ ವಾಸಿಯಾಗಿರುತ್ತೇನೆ. ನನಗೆ 30 ಎಕರೆ ಜಮೀನಿರುತ್ತದೆ. ಸದರಿ ಜಮೀನಿನಲ್ಲಿ ಕಾಫೀ ಮತ್ತು ಅಡಿಕೆ ಬೆಳೆಯನ್ನು ಬೆಳೆಯಲಾಗುತ್ತದೆ. ಚಾಸಾ-2 ರವರಿಗೆ ಏತಕ್ಕಾಗಿ ಗಾಯವಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಚಾಸಾ-2 ರವರು ಏಣಿಯನ್ನು ಹತ್ತಿದ ಸಮಯದಲ್ಲಿ ತಲೆ ಕೆಳಗಾಗಿ ಬಿದ್ದ ಪರಿಣಾಮ ಗಾಯವಾಗಿರುತ್ತದೆ ಎಂದು ಆರೋಪಿಯ

ಹೇಳುತ್ತಾರೆ ಎಂದರೆ ನನಗೆ ತಿಳಿದಿರುವುದಿಲ್ಲ. ನನಗೆ ಘಟನೆಯ ಬಗ್ಗೆ ಚಾಸಾ-7 ರವರು ನೀಡಿದ ಮಾಹಿತಿಯನ್ನು ಹೊರತುಪಡಿಸಿ ಘಟನೆ ಸಂಭವಿಸಿದ ಕುರಿತು ಯಾವುದೇ ಮಾಹಿತಿ ಇರುವುದಿಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ  ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್  ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.